ಕೆ. ಆರ್. ಮಿಲ್ಲನ್ನು ತೆರೆಯಂಬ ಬಗ್ಗೆ.

೨೧೮. ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಕೆ. ಆರ್. ಮಿಲ್‌ನ್ನು ಪುನರಾಂಭಿಸಲು ಸರ್ಕಾರದವರು ತೆಗೆದು ಕೊಂಡಿರುವ ಕ್ರಮಗಳೇನು;

ಆ) ಕಾರ್ಮಿಕರ ಬವಣೆ ನೀಗಲು ಎಷ್ಟು ದಿನಗಳ ಒಳಗಾಗಿ ಕಾರ್ಖಾನೆಯನ್ನು ಪುನಃ ಆರಂಭಿಸಲಾಗುವುದು.

ಶ್ರೀ ಎ. ಎಸ್ ನಾಡಗೌಡ (ಕಾರ್ಮಿಕ ಸಚಿವರು).—

ಅ) ಮೈಸೂರಿನ ಕೆ. ಆರ್. ಮಿಲ್‌ನ ನೌಕರರು ವೇತನ ಹೆಚ್ಚಳವನ್ನು ಕೋರಿ ಮುಷ್ಕರ ಹೂಡಿದ್ದರು. ಈ ಬಗ್ಗೆ ಆದ ಒಪ್ಪಂದದಂತೆ ಮಾಲೀಕರು ಒಪ್ಪಂದವನ್ನು ಉಲ್ಲಂಘಿಸಿದ್ದೇ ಅಲ್ಲದೆ, ಹಣಕಾಸಿನ ತೊಂದರೆಯ ಕಾರಣವನ್ನು ಕೊಟ್ಟು ಬೀಗಮುದ್ರೆಯನ್ನು ಘೋಷಿಸಿದರು. ಸರ್ಕಾರ ಈ ಬೀಗಮುದ್ರೆಯನ್ನು ಅಕ್ರಮವೆಂದು ಸಾರಿ ಪ್ರಕಟಣೆ ಹೊರಡಿಸಿದಾಗ್ಯೂ ಮಾಲೀಕರು ಮಿಲ್‌ನ್ನು ತೆರೆಯಲಿಲ್ಲ. ಈ ಬಗ್ಗೆ ಕಾನೂನು ಉಲ್ಲಂಘನೆಗಾಗಿ ಮಾಲೀಕ ವರ್ಗದವರ ಮೇಲೆ ಮೊಕದ್ದಮೆ ಹೂಡಲಾಗಿದ್ದು, ಸದರೀ ಮೊಕದ್ದಮೆಯು ಮೈಸೂರಿನ ಒಂದನೇ ತರಗತಿಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಬಾಕಿ ಇದೆ. ಆದರೂ ಸಹ ಗಿರಣಿಯನ್ನು ತೆಗೆಯುವ ಸಲುವಾಗಿ ಪರಸ್ಪರ ಪ್ರಾತಂಕತೆಗಳು ಸರ್ಕಾರದ ಮಟ್ಟದಲ್ಲಿ. ಕಾರ್ಮಿಕ ಆಯುಕ್ತರ ಮಟ್ಟದಲ್ಲಿ ಮುಂದುವರಿದು ೩೧ ದಿವಸಗಳ ಒಳಗಾಗಿ ಗಿರಣಿಯನ್ನು ಪ್ರಾರಂಭಿಸಲು ಒಪ್ಪಿಸಿ ಪುನಃ ದಿನಾಂಕ ೨೬-೭-೬೫ರಂದು ಒಂದು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಆದರೂ ಆಡಳಿತ ವರ್ಗದವರು ಗಿರಣಿಯನ್ನು ತೆರೆಯಲಿಲ್ಲ. ಈ ಬಗ್ಗೆಯೂ ಸಹ ಮೊಕದ್ದಮೆ ಹೂಡಿದ್ದು ಅದು ಮೈಸೂರಿನ ನ್ಯಾಯಾಲಯದಲ್ಲಿ ಬಾಕಿ ಇದೆ.

ಬಿ. ಕೆ. ಆರ್. ಮಿಲ್ ಸಂಸ್ಥೆಯು ದೆಹಲಿಯ ಬಿ. ಐ. ಎಫ್ ಆರ್ ಮುಂದೆ ಅರ್ಜಿ ಸಲ್ಲಿಸಿದೆ. ಆದ್ದರಿಂದ ಈ ಹಂತದಲ್ಲಿ ಇಂತಹ ದಿನಾಂಕದಿಂದಲೇ ಕಾರ್ಖಾನೆಯನ್ನು ಪುನಃ ಪ್ರಾರಂಭಿಸ ಲಾಗುವುದೆಂದು ಹೇಳುವುದು ಸಾಧ್ಯವಾಗುವುದಿಲ್ಲ.

ಮಿನಿ ವಿಧಾನ ಸೌಧ

೨೧೯. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೦೬ನೇ ಇಸವಿಯಲ್ಲಿ ಬೈಲಹೊಂಗಲದ ತಾಲ್ಲೂಕು ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೈಲಹೊಂಗಲದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣವು ಅತ್ಯವಶ್ಯಕವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಾದರೆ, ಮಿನಿ ವಿಧಾನಸೌಧ ನಿರ್ಮಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ೧೯೦೬ನೇ ಇಸವಿಯಲ್ಲಿ ಬೈಲಹೊಂಗಲದ ತಾಲ್ಲೂಕು ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.